ದಿನಾಂಕ: 30-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಶ್ರೀ.ಪಿ.ಎಮ್.ಎಚ್. ವಾದಿ ಪರ ವಕೀಲರಿಂದಃ**

12. ನನ್ನ ಉದ್ಯೋಗ ಒಕ್ಕಲುತನ. ನನಗೆ 02 ಎಕರೆ ಜಮೀನು ಇದೆ. ಸದರಿ ಜಮೀನಿನ ಸರ್ವೆ ನಂಬರ ನನಗೆ ಹೇಳಲು ಬರುವುದಿಲ್ಲ. ಸದರಿ 02 ಎಕರೆ ಜಮೀನು ಹಡಗಿನಾಳ ಮತ್ತು ಬಗರನಾಳದಲ್ಲಿ ಇದೆ. ಮುಂದುವರೆದು ಸಾಕ್ಷಿದಾರರು ತಮಗೆ 03ಎ-08ಗು ಜಮೀನು ಇದೆ ಎಂದು ಹೇಳುತ್ತಾರೆ. ಸದರಿ ಜಮೀನು ಬಗರನಾಳದಲ್ಲಿ ಇದೆ. ಸದರಿ ಜಮೀನಿನಲ್ಲಿ ನಾನು ಕಬ್ಬು ಮತ್ತು ಗೋವಿನ ಜೋಳ ಬೆಳೆಯುತ್ತೇನೆ. ನನ್ನ ಜಮೀನಿನಲ್ಲಿ ಬೆಳೆದ ಕಬ್ಬನ್ನು ಹುಣಶ್ಯಾಳ ಸಕ್ಕರೆ ಕಾರಖಾನೆಗೆ ಕಳುಹಿಸುತ್ತೇನೆ. ವರ್ಷಕ್ಕೆ 100ಟನ್ ಕಬ್ಬು ಬೆಳೆಯುತ್ತೇವೆ. ನಾನು ಬೆಳೆದ ಕಬ್ಬಿನ ಬೆಳೆ ಸಕ್ಕರೆ ಕಾರಖಾನೆಗೆ ಕಳುಹಿಸಿದ ಬಗ್ಗೆ ಸ್ಲಿಪ್‌ಗಳು ಮನೆಯಲ್ಲಿ ಇವೆ. ಕಬ್ಬಿನ ಬಿಲ್ಲು ನನ್ನ ಖಾತೆಗೆ ಜಮಾ ಆಗುತ್ತದೆ ಎಂದರೆ ಸರಿ. ಕಬ್ಬಿನ ಬಿಲ್ಲು ಜಮಾ ಆದ ಬಗ್ಗೆ ನನ್ನ ಪಾಸಪುಸ್ತಕದಲ್ಲಿ ನಮೂದು ಇದೆ. ನನ್ನ ಪಾಸಪುಸ್ತಕ ಮನೆಯಲ್ಲಿ ಇದೆ. ನನ್ನ ಜಮೀನಿನಲ್ಲಿ ನಾನು ಕಬ್ಬು ಬೆಳೆಯುತ್ತೇನೆ, ಬೆಳೆದ ಕಬ್ಬನ್ನು ಹುಣಶ್ಯಾಳ ಸಕ್ಕರೆ ಕಾರಖಾನೆಗೆ ಕಳುಹಿಸಿದ್ದೇನೆ ಹಾಗೂ ಸಕ್ಕರೆ ಕಾರಖಾನೆಯವರು ಕಬ್ಬಿನ ಬಿಲ್ಲು ನನ್ನ ಖಾತೆಗೆ ಜಮಾ ಮಾಡಿದ ಬಗ್ಗೆ ಪಾಸಪುಸ್ತಕದಲ್ಲಿ ನಮೂದು ಇದೆ ಎಂದು ತೋರಿಸಲು ದಾಖಲೆಗಳನ್ನು ಹಾಜರ ಮಾಡಿಲ್ಲ. ನಾನು ಈ ಹೊತ್ತಿನವರೆಗು ಯಾವುದೇ ಉದ್ಯೋಗ ಮಾಡಿಲ್ಲ ಎಂದರೆ ಸರಿಯಲ್ಲ.

13. 03ಎ-08ಗು ಜಮೀನಿನಲ್ಲಿ ನಾನು ಕಬ್ಬು ಮತ್ತು ಗೋವಿನ ಜೋಳ ಬೆಳೆಯುತ್ತೇನೆ, ಕಬ್ಬನ್ನು ಸಕ್ಕರೆ ಕಾರಖಾನೆಗೆ ಕಳುಹಿಸುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 03ಎ-08ಗು ಜಮೀನಿನಲ್ಲಿ ನಿಂಗವ್ವ ಮತ್ತು ಚಿನ್ನವ್ವ ಇವರಿಗೆ ತಲಾ ಅರ್ಧ ಹಿಸ್ಸೆ ಇದೆ ಎಂದರೆ ಸರಿ.

14. ಭೀಮ ನಾಯ್ಕ ನನ್ನ ತಂದೆ ಎಂದರೆ ಸರಿ. ನನ್ನ ತಾಯಿ ಚಿನ್ನವ್ವ ಎಂದರೆ ಸರಿ. ನನ್ನ ತಾಯಿ ಈಗ ಮೃತಪಟ್ಟಿರುತ್ತಾರೆ, ಯಾವ ದಿನಾಂಕದಂದು ಮೃತಪಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆದರೆ 4-5 ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ. ಇಂದ್ರವ್ವ ಅಂದರೆ 2ನೇ ಪ್ರತಿವಾದಿ ಹಾಗೂ ಸುಶೀಲಾ ನನ್ನ ಅಕ್ಕಂದಿಯರು ಎಂದರೆ ಸರಿ. ಈರಪ್ಪ ನನ್ನ ಅಣ್ಣ ಎಂದರೆ ಸರಿಯಲ್ಲ. ಇಂದ್ರವ್ವ ಇವರಿಗೆ ಸರಸ್ವತಿ, ಲಕ್ಷ್ಮೀ, ಶಾಸಪ್ಪ ಮತ್ತು ವಿಠ್ಠಲ ಎಂದು 04 ಜನ ಮಕ್ಕಳು ಎಂದರೆ ಸರಿ. ಸದರಿ ಸರಸ್ವತಿಯವರನ್ನು ನನಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಈರಪ್ಪ ಮತ್ತು ಸುಶೀಲಾ ಈ ತೀರಿಕೊಂಡಿದ್ದಾರೆ ಎಂದರೆ ಸರಿ. ಸುಶೀಲಾ ಇವರ ಮಗಳ ಹೆಸರು ಆಶವ್ವ ಎಂದರೆ ಸರಿ. ಈರಪ್ಪನ ಹೆಂಡತಿಯ ಊರು ಕೌಜಲಗಿ ಎಂದರೆ ಸರಿ.

15. ನನ್ನ, ಇಂದ್ರವ್ವ ಮತ್ತು ಸುಶೀಲಾ ಇವರ ಮದುವೆಗಳು ನಮ್ಮ ಮನೆಯ ಮುಂದೆ ಆಗಿವೆ ಎಂದರೆ ಸರಿ. ನಮ್ಮ ಮದುವೆ ಖರ್ಚುಗಳನ್ನು ನಮ್ಮ ತಂದೆ ಮಾಡಿರುತ್ತಾರೆ ಎಂದರೆ ಸರಿ. ಈರಪ್ಪ ಮತ್ತು ಅವರ ಹೆಂಡತಿಯ ನಡುವೆ ಬಿಡುಗಡೆಯಾಗಿ ಈರಪ್ಪನ ಹೆಂಡತಿ ನಮ್ಮ ತಂದೆಯಿಂದ ರೂ.60,000/- ದಿಂದ

ರೂ.70,000/- ಪಡೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ನಂತರ ನನ್ನ ಅಣ್ಣ ಈರಪ್ಪ ಇವರ 2ನೇ ಮದುವೆಯನ್ನು ಲಕ್ಷ್ಮೀ ಇವರ ಜೊತೆ ಆಗಿದೆ ಎಂದರೆ ಸರಿ. ನನ್ನ ಅಣ್ಣನ 2ನೇ ಮದುವೆಯ ಖರ್ಚನ್ನು ನನ್ನ ತಂದೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

16. ನನ್ನ ಅತ್ತೆ ಇಂದ್ರವ್ವ ಇವರ ಗಂಡನ ಹೆಸರು ಭೀಮಶೆಪ್ಪ. ಸದರಿ ಭೀಮಶೆಪ್ಪ ಇವರ ಮೇಲೆ ಕೊಲೆ ಪ್ರಕರಣ ದಾಖಲಾಗಿತ್ತು ಎಂದರೆ ಸರಿಯಲ್ಲ. ಸದರಿ ಭೀಮಶೆಪ್ಪ ಇವರಿಗೆ ಜಾಮೀನು ಕೊಡಿಸುವುದು ಮತ್ತು ವಕೀಲರನ್ನು ನೇಮಕ ಮಾಡುವುದಕ್ಕೆ ನಮ್ಮ ತಂದೆಯೇ ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಭೀಮಶೆಪ್ಪ ಇವರಿಗೆ 10 ವರ್ಷ ಶಿಕ್ಷೆ ಆಗಿದೆ ಎಂದರೆ ಸರಿಯಲ್ಲ.

17. ಒಂದು ಮದುಗೆ ಸಾಧಾರಣ ರೂ.2,00,000/- ಖರ್ಚು ಆಗುತ್ತದೆ ಎಂದರೆ ಸರಿಯಲ್ಲ. ಇಂದ್ರವ್ವ ಇವರ ನಾಲ್ಕು ಹೆರಿಗೆಗಳು ನಮ್ಮ ಮನೆಯೇ ಆಗಿವೆ ಎಂದರೆ ಸರಿಯಲ್ಲ. ನಾಲ್ಕು ಹೆರಿಗೆ ಖರ್ಚುಗಳನ್ನು ನಮ್ಮ ತಂದೆಯೇ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

18. ನನಗೆ 03 ಜನ ಮಕ್ಕಳು ಎಂದರೆ ಸರಿ. ಅವರುಗಳು ರಾಘವೇಂದ್ರ, ರವಿಚಂದ್ರ ಮತ್ತು ಹಣಮಂತ. ಸದರಿಯವರ ಪೈಕಿ ಈಗ ಹಣಮಂತ ಮೃತಪಟ್ಟಿರುತ್ತಾರೆ. ನನ್ನ ಇಬ್ಬರು ಮಕ್ಕಳು ಶಾಲೆಗೆ ಹೋಗುತ್ತಾರೆ ಎಂದರೆ ಸರಿ.

ನನ್ನ ಮಕ್ಕಳ ವಿದ್ಯಾಭ್ಯಾಸದ ಖರ್ಚನ್ನು ನಮ್ಮ ತಂದೆ ನೋಡಿಕೊಳ್ಳುತ್ತಾರೆ ಎಂದರೆ ಸರಿಯಲ್ಲ.

19. ನನ್ನ, ನನ್ನ ಸಹೋದರಿಯರ ಮದುವೆ, ನನ್ನ ಸಹೋದರಿಯರ ಹೆರಿಗೆ ಮತ್ತು ನನ್ನ ಮಾವನ ಕೊಲೆ ಪ್ರಕರಣದ ವಿಚಾರವಾಗಿ ನಮ್ಮ ತಂದೆ ಸುಮಾರು ಸಾಲ ಮಾಡಿದ್ದರು ಎಂದರೆ ಸರಿಯಲ್ಲ. ಈ ಕಾರಣಗಳಿಂದ ನಮ್ಮ ತಂದೆಗೆ ದುಡ್ಡಿನ ಅಡಚಣೆ ಬಹಳ ಇತ್ತು ಎಂದರೆ ಸರಿಯಲ್ಲ. ನನ್ನ ತಾಂಯಿಗೆ ಗಂಟಲು ಕ್ಯಾನ್ಸರ ಆಗಿತ್ತು ಎಂದರೆ ಸರಿ. ನನ್ನ ತಾಯಿಯ ಚಿಕಿತ್ಸೆಗೆ ನನ್ನ ತಂದೆ ಸುಮಾರು ಹಣ ಖರ್ಚು ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿಯ ಚಿಕಿತ್ಸೆ ಖರ್ಚಿಗಾಗಿ ನನ್ನ ತಂದೆ ಸಾಕಷ್ಟು ಸಾಲ ಮಾಡಿದ್ದರು ಎಂದರೆ ಸರಿಯಲ್ಲ.

20. ದಾವಾ ಆಸ್ತಿಯನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಸರ್ವೆ ನಂ.9/1 ಮತ್ತು 10/1 ಇವೆ ಎಂದು ಬರೆಯಿಸಿದ್ದೇನೆ ಎಂದರೆ ಸರಿ. ಸದರಿ ಜಮೀನುಗಳ ಉತಾರದಲ್ಲಿ ನನ್ನ ದೊಡ್ಡಮ್ಮ ನಿಂಗವ್ವ, ನನ್ನ ಮತ್ತು ನನ್ನ ಅಕ್ಕ ಗಿರಿಜವ್ವ ಇವರ ಹೆಸರುಗಳು ಇರುತ್ತವೆ.

21. ಸರ್ವೆ ನಂ.9/1 ಮತ್ತು 10/1 ರ ಜಮೀನುಗಳನ್ನು ನಿಂಗವ್ವ ಕೋಂ ಭೀಮಪ್ಪ ನಾಯ್ಕ ಹಾಗೂ ನನ್ನ ತಾಯಿ ಚಿನ್ನವ್ವ ಕೋಂ ಭೀಮನಾಯ್ಕ ನಾಯ್ಕ ಇವರುಗಳು ಚಂದ್ರಪ್ಪ ಕಲ್ಲಪ್ಪ ಕಂಬಿ ಇವರಿಗೆ ದಿನಾಂಕ 29/12/1995 ರಂದು ರೂ.58,000/- ಕ್ಕೆ ತಮ್ಮ ಕುಟುಂಬದ ಅಡಚಣೆಗಾಗಿ ಮಾರಾಟ ಮಾಡಿದ್ದಾರೆ

ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರದ ಆಧಾರದ ಮೇಲೆ ಖರೀದಿ ಮಾಡಿದವಾರ ಹೆಸರು ಎಂ.ಇ.ನಂ.2760ರ ಪ್ರಕಾರ ಉತಾರದಲ್ಲಿ ದಾಖಲ ಆಗಿದೆ ಎಂದರೆ ಸರಿಯಲ್ಲ. ಸರ್ವ ನಂ.9/1 ಮತ್ತು 10/1ರ ಚಾಲ್ತಿ ಉತಾರದಲ್ಲಿ ಉದ್ದವ್ವ ಕೋಂ ಶಿವಲಿಂಗಪ್ಪ ಶಿಂಗಾಡಿ ಇವರ ಹೆಸರು ದಾಖಲ ಇದೆ ಎಂದರೆ ಸರಿಯಲ್ಲ.

22. ದಾವಾ ಆಸ್ತಿಯನ್ನು ನಮ್ಮ ತಂದೆ ಮನೆಯ ಅಡಚಣೆಗಾರಿ ಮಾರಾಟ ಮಾಡಲು ತೆಗೆದಿದ್ದರು ಎಂದರೆ ಸರಿಯಲ್ಲ. ಸದರಿ ಜಮೀನಿನ ಮಾತುಕತೆ ಕಾಲದಲ್ಲಿ ನಾನು, ನನ್ನ ಹೆಂಡತಿ, ನನ್ನ ತಾಯಿ, ನನ್ನ ತಂದೆ ಹಾಗೂ ವಾದಿ ಹಾಜರ ಇದ್ದೆವು ಎಂದರೆ ಸರಿಯಲ್ಲ. ಸದರಿ ಮಾತುಕತೆ ಸಮಯದಲ್ಲಿ ದಾವಾ ಆಸ್ತಿಯನ್ನು ರೂ.6,00,000/-ಕ್ಕೆ ಮಾರಾಟ ಮಾಡುವುದಕ್ಕಾಗಿ ನಿರ್ಣಯಿಸಲಾಗಿತ್ತು ಎಂದರೆ ಸರಿಯಲ್ಲ. ಸದರಿ ಮಾತುಕತೆಯ ಪ್ರಕಾರ ವಾದಿ ನನ್ನ ತಂದೆಗೆ ರೂ.5,16,000/- ನಗದು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಖರೀದಿ ಕರಾರ ಪತ್ರದ ಪ್ರಕಾರ 03 ವರ್ಷದ ಅವಧಿ ನಿಗಧಿ ಪಡಿಸಲಾಗಿತ್ತು ಎಂದರೆ ಸರಿಯಲ್ಲ. ಆ 03 ವರ್ಷದ ಅವಧಿಯಲ್ಲಿ 11-ಇ ನಕಾಶೆ ಹಾಗೂ ಆಸ್ತಿ ಮೇಲಿನ ಭೋಜಾ ತೆಗೆದುಕೊಡುವುದಾಗಿ ನಾವು ಒಪ್ಪಿಕೊಂಡಿದ್ದೆವು ಎಂದರೆ ಸರಿಯಲ್ಲ. ಸದರಿ ನಮ್ಮ ತಂದೆ ಆಸ್ತಿ ಮಾರಾಟ ಮಾಡಲು ತೆಗೆದಿದ್ದಕ್ಕೆ ನನ್ನ ಹಾಗೂ ನನ್ನ ಹೆಂಡತಿಯದು ಸಹ ಒಪ್ಪಿಗೆ ಇದೆ ಎಂದು ಹೇಳಿ ನಾವು ಖರೀದಿ ಕರಾರ ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಹೆಂಡತಿಯ ಒಪ್ಪೆಗ ಪಡೆದು ನನ್ ನ ತಂದೆ

ದಾವಾ ಆಸ್ತಿಯನ್ನು ವಾದಿಗೆ ಮಾರಾಟ ಮಾಡಲು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

23. ಸದರಿ ಕರಾರ ಪತ್ರವನ್ನು ದಿಃ11/07/2017 ರಂದು ತಯಾರ ಮಾಡಲಾಗಿತ್ತು ಎಂದರೆ ಸರಿಯಲ್ಲ. ಸದರಿ ಕರಾರ ಪತ್ರ ದಿಃ 26/07/2017 ರಂದು ನೋಂದ ಆಗಿದೆ ಎಂದರೆ ಸರಿಯಲ್ಲ. ನನ್ನ ತಂದೆ ವಾದಿಯಿಂದ ರೂ.5,16,000/- ಹಣವನ್ನು ಬಸಪ್ಪ ಹಾಲನ್ನವರ, ಗುರುಶಂಕರ ತಿಗಡಿ, ದೀಪಕ ಕಲ್ಲೋಳಿ, ಚಿನ್ನವ್ವ ಕಲ್ಲೋಳಿ ಇವರ ಸಮಕ್ಷಮ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ಕರಾರ ಪತ್ರ ತಯಾರ ಮಾಡಿದ ನಂತರ ಅದರಲ್ಲಿರುವ ವಿಷಯಗಳನ್ನು ನಮಗೆ ಓದಿ ಹೇಳಿದ ನಂತರ ನಾವು ಅದರಲ್ಲಿ ಹೇಳಿರುವ ವಿಷಯ ಸರಿ ಇದ್ದುದ್ದರಿಂದ ಖರೀದಿ ಕರಾರ ಪತ್ರಕ್ಕೆ ನಾವು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಕರಾರ ಪತ್ರದ ಪ್ರಕಾರ 11-ಇ ನಕಾಶೆ ಮತ್ತು ಭೋಜಾ ಕಡಿಮೆ ಮಾಡಿಸುವ ಜವಾಬ್ದಾರಿ ನಾವು ಒಪ್ಪಿಕೊಂಡಿದ್ದೆವು ಎಂದರೆ ಸರಿಯಲ್ಲ. 2017 ರಲ್ಲಿ ದಾವಾ ಆಸ್ತಿಯ ಬೆಲೆ ರೂ.6,00,000/- ಇತ್ತು ಎಂದರೆ ರೂ.20,00,000/- ಇತ್ತು ಎಂದು ಹೇಳುತ್ತಾರೆ. ಆಗ ದಾವಾ ಆಸ್ತಿಯ ಬೆಲೆ ರೂ.20,00,000/- ಇತ್ತು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಹೊಲದ ಪಕ್ಕದಲ್ಲಿರುವ ಹೊಲವನ್ನು ರೂ.20,00,000/- ಮಾರಾಟ ಮಾಡಿದ್ದರು, ಇದರ ಆಧಾರದ ಮೇಲೆ ನಾನು 2017ರಲ್ಲಿ ದಾವಾ ಆಸ್ತಿಯ ಬೆಲೆ ರೂ.20,00,000/- ಇತ್ತು ಎಂದು ಹೇಳುತ್ತಿದ್ದೇನೆ. 2017ರಲ್ಲಿ ದಾವಾ ಆಸ್ತಿಯ ಬೆಲೆ ಎಷ್ಟು ಇತ್ತು ಎಂದು

ತೋರಿಸಲು ಉಪ-ನೋಂದಣಿ ಅಧಿಕಾರಿಗಳ ಕಚೇರಿಯಲ್ಲಿ ದಾಖಲೆಗಳು ಸಿಗುತ್ತವೆ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ನಾನು ಹಾಜರ ಮಾಡಬಹುದು ಎಂದರೆ ಸರಿ.

24. ದಾವಾ ಆಸ್ತಿಯಲ್ಲಿ ನಮ್ಮ ತಂದೆಗೆ ಮಾತ್ರ ಹಕು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನಮ್ಮ ಹಿರಿಯರ ಆಸ್ತಿ ಇದ್ದು, ಅದರಲ್ಲಿ ನನಗೆ, ನನ್ನ ಮಕ್ಕಳಿಗೆ ಹಕ್ಕು ಇದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುದವರೆದ ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ